**ಸರ್ಕಾರದ ಆದೇಶ ಸಂಖ್ಯೆ: ಕಸಂವಾ 222 ಕಸಧ 2016, ದಿನಾಂಕ:02-02-2017ಕ್ಕೆ**

**ಅನುಬಂಧ**

**ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ವತಿಯಿಂದ ಪ್ರದಾನ ಮಾಡುವ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಕುರಿತಂತೆ ಅನುಸರಿಸಬೇಕಾದ ಮಾರ್ಗಸೂಚಿಗಳು.**

1. ಕರ್ನಾಟಕ ಭಾಷಿಕ ಪ್ರಾಂತ್ಯವಾಗಿ ಏಕೀಕರಣಗೊಂಡ ವರ್ಷಗಳ ಸಂಖ್ಯೆಗೆ ಆಧಾರಿತವಾಗಿ ಪ್ರತಿ ವರ್ಷವೂ ಪ್ರಶಸ್ತಿಗಳನ್ನು ಮಿತಿಗೊಳಿಸುವುದು ಮತ್ತು ಆಯಾ ವರ್ಷ ಏಕೀಕರಣಗೊಂಡ ವರ್ಷಕ್ಕೆ ಸಮನಾಗಿ ಪ್ರತಿ ವರ್ಷಕ್ಕೆ ಒಂದರಂತೆ ಪ್ರಶಸ್ತಿ ಸಂಖ್ಯಾಮಿತಿ ಏರಿಸುವುದು.

2. ಈ ಪ್ರಶಸ್ತಿಯನ್ನು ಹಲವು ಸಂದರ್ಭಗಳಲ್ಲಿ ರಾಜ್ಯ ಪ್ರಶಸ್ತಿ ಮತ್ತು ರಾಜ್ಯೋತ್ಸವ ಪ್ರಶಸ್ತಿ ಎಂಬ ಹೆಸರುಗಳಿಂದ ಗುರುತಿಸಲಾಗಿದ್ದು, ಈ ಪ್ರಶಸ್ತಿಯನ್ನು ಇನ್ನು ಮುಂದೆ ರಾಜ್ಯೋತ್ಸವ ಪ್ರಶಸ್ತಿ ಎಂದೇ ಗುರುತಿಸುವುದು ಮತ್ತು ಅದರಂತೆ ಕ್ರಮವಹಿಸುವುದು.

3. ವಿವಿಧ ಇಲಾಖೆಗಳು ಮತ್ತು ಜಿಲ್ಲಾಡಳಿತಗಳು ನವೆಂಬರ್ ಒಂದರಂದು ನೀಡುತ್ತಿರುವ ಪ್ರಶಸ್ತಿಗಳನ್ನು ಸಹ ರಾಜ್ಯೋತ್ಸವ ಪ್ರಶಸ್ತಿ ಎಂದು ಗುರುತಿಸುತ್ತಿರುವ ಗೊಂದಲವನ್ನುಂಟು ಮಾಡಿದೆ, ಆದ್ದರಿಂದ ಆ ರೀತಿಯ ಪ್ರಶಸ್ತಿಗಳನ್ನು ವಿತರಿಸುವಾಗ ರಾಜ್ಯೋತ್ಸವ ಪ್ರಶಸ್ತಿ ಎಂಬ ಹೆಸರಿನಿಂದ ಗುರುತಿಸತಕ್ಕದ್ದಲ್ಲ.

4. ಈಗಿರುವಂತ ವಿಷಯ ಕ್ಷೇತ್ರಗಳನ್ನು ಗುರುತಿಸುವುದು ಮತ್ತು ಹೊಸದಾಗಿ ವಿಕಸನಗೊಳ್ಳುವ ವಿಷಯ ಕ್ಷೇತ್ರಗಳ ಸಾಧಕರನ್ನು ಆರಂಭದಲ್ಲಿ ಸಂಕೀರ್ಣ ಕ್ಷೇತ್ರದಲ್ಲಿ ಗುರುತಿಸುವುದು, ನಂತರದ ದಿನಗಳಲ್ಲಿ ಪ್ರತ್ಯೇಕ ವಿಷಯವಾಗಿ ಗುರುತಿಸಲು ಕ್ರಮವಹಿಸುವುದು.

5. ರಾಜ್ಯೋತ್ಸವ ಪ್ರಶಸ್ತಿ ಫಲಕದ ಜೊತೆ ನೀಡುತ್ತಿರುವ ಹಾರ, ಶಾಲು, ಮೈಸೂರು ಪೇಟ, ಹಣ್ಣಿನ ಬುಟ್ಟಿಗಳ ಜೊತೆಗೆ ಚಿನ್ನದ ಪದಕವನ್ನು 5 ಗ್ರಾಂಗಳಿಗೆ ಹೆಚ್ಚಿಸಿ ಪ್ರದಾನ ಮಾಡುವುದು, ಮತ್ತು ಪ್ರಶಸ್ತಿ ಮೊತ್ತವಾಗಿ ಒಂದು ಲಕ್ಷ ರೂಪಾಯಿಗಳನ್ನು - - - ನೀಡುವುದು.

6. ರಾಜ್ಯೋತ್ಸವ ಪ್ರಶಸ್ತಿಯ ಪುರಸ್ಕೃತರನ್ನು ಮರಣೋತ್ತರವಾಗಿ ಆಯ್ಕೆ ಮಾಡುವಂತಿಲ್ಲ.

7. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ನೈತಿಕ ಅಧಃಪತನಕ್ಕೊಳಪಡುವ ಅಪರಾಧ ಹಿನ್ನಲೆ ಇಲ್ಲದಿರುವುದನ್ನು ಖಾತರಿ ಪಡಿಸಿಕೊಳ್ಳುವುದು. ಯಾವುದೇ ಕ್ಷೇತ್ರದ ಸಾಧಕರನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಮುನ್ನ ಆ ವ್ಯಕ್ತಿಯ ಹಿನ್ನಲೆ ಗಮನಿಸುವುದು ಮತ್ತು ಸಮಾಜದಲ್ಲಿ ಗಣನೀಯ ಸಾಧನ ಸಲ್ಲಿಸಿದವರೆಂದು ಗುರುತಿಸಲ್ಪಟ್ಟ ವ್ಯಕ್ತಿಗಳನ್ನು ಮಾತ್ರ ಶಿಫಾರಸ್ಸು ಮಾಡುವುದು.

8. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆಯ ಸಂದರ್ಭದಲ್ಲಿ ಯಾವುದೇ ತಪ್ಪು ಮಾಹಿತಿಗಳ ಆಧಾರದಲ್ಲಿ ಪ್ರಶಸ್ತಿ ಪುರಸ್ಕೃತರನ್ನು ಪ್ರಶಸ್ತಿಗೆ ಆಯ್ಕೆ ಮಾಡಿದ್ದಲ್ಲಿ ಅದನ್ನು ಸರ್ಕಾರವು ಹಿಂಪಡೆಯಲು ಅವಕಾಶ ಇರುತ್ತದೆ.

9. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಸಾಮಾನ್ಯ ಕನಿಷ್ಠ ವಯೋಮಿತಿ 60 ವರ್ಷಗಳನ್ನು ಪೂರೈಸಿರಬೇಕು. ರಾಷ್ಟ್ರೀಯ ಅಥವಾ ಅಂತರರಾಷ್ಟ್ರೀಯ ಮನ್ನಣೆ ಗಳಿಸಿದ ಅತಿ ವಿಶೇಷ ಸಾಧಕರ ಪ್ರಕರಣಗಳಲ್ಲಿ ಮಾತ್ರ ವಿನಾಯಿತಿ ನೀಡಲು ಅವಕಾಶವಿರುತ್ತದೆ.

10. ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವಾಗ ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಮತ್ತು ಲಿಂಗಾಧಾರಿತ ನ್ಯಾಯಗಳನ್ನು ಗಮನದಲ್ಲಿರಿಸಿಕೊಂಡು, ವಿಶೇಷ ಚೇತನ ಸಾಧಕರನ್ನು ಸಹ ಆಯ್ಕೆ ಮಾಡುವುದು, ಹೀಗೆ ಮಾಡುವಾಗ ಜಿಲ್ಲೆಗೆ ಕನಿಷ್ಟ ಒಂದರಂತೆ ಪ್ರಾತಿನಿಧ್ಯ ಒದಗಿಸಲು ಕ್ರಮ ವಹಿಸುವುದು.

11. ಪ್ರತಿ ವಿಷಯ ಕ್ಷೇತ್ರವನ್ನು ಗುರುತಿಸುವಾಗ ಅದರಲ್ಲಿನ ವಿವಿಧ ಶಾಖೆಗಳನ್ನು ಸಹ ಗಮನಿಸುವುದು ಉದಾಹರಣೆಗೆ ವೈದ್ಯಕೀಯ ವಿಭಾಗವನ್ನು ಗುರುತಿಸುವಾಗ, ಆಯುರ್ವೇದ, ಯೋಗ, ಯುನಾನಿ, ಹೋಮಿಯೋಪತಿ, ನಾಟಿವೈದ್ಯ, ಫಿಸಿಯೋಥೆರಪಿ, ಆಪ್ತ ಸಮಾಲೋಚನೆ, ಸಂಶೋಧನೆ ಹೀಗೆ ಸಾಧ್ಯವಾದ ಎಲ್ಲ ಕ್ಷೇತ್ರಗಳನ್ನು ಆದ್ಯತೆಯ ಮೇಲೆ ಪ್ರತಿವರ್ಷವೂ ಗುರುತಿಸಲು ಕ್ರಮ ವಹಿಸುವುದು.

12. ಶಿಕ್ಷಣ, ಆರೋಗ್ಯ ಇನ್ನಿತರ ಕ್ಷೇತ್ರಗಳನ್ನು ಗುರುತಿಸುವಾಗ ಆಯಾ ಕ್ಷೇತ್ರದ ತಜ್ಞರನ್ನು ಮತ್ತು ಸಾಧಕರನ್ನು ಮಾತ್ರ ಪರಿಗಣಿಸಬೇಕು. ಇದು ಎಲ್ಲ ಕ್ಷೇತ್ರಗಳಲ್ಲಿಯೂ ಅನ್ವಯವಾಗುತ್ತದ.

13. ಚಾಲ್ತಿಯಲ್ಲಿರುವ ರಾಜ್ಯ ಪ್ರಶಸ್ತಿ ಸಲಹಾ ಸಮಿತಿ ಸದಸ್ಯರು, ಅಕಾಡಮಿಯ ಪದಾಧಿಕಾರಿಗಳು ಮತ್ತು ಪ್ರಶಸ್ತಿ ಸಲಹಾ ಸಮಿತಿಯಲ್ಲಿರುವ ತಜ್ಞ ಸದಸ್ಯರು ತಮಗೆ ತಾವೇ ಪ್ರಶಸ್ತಿ ಕೊಟ್ಟುಕೊಳ್ಳುವಂತಿಲ್ಲ ಮತ್ತು ಸ್ವತ: ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ ಅಥವ ಪರಸ್ಪರ ಶಿಫಾರಸ್ಸು ಮಾಡಿಕೊಳ್ಳುವಂತಿಲ್ಲ.

14. ಇತರ ಯಾವುದೇ ಪ್ರಶಸ್ತಿಗಳನ್ನು ಪಡೆದಿರುವುದು ರಾಜ್ಯೋತ್ಸವ ಪ್ರಶಸ್ತಿ ನೀಡಿಕೆಗೆ ತಡೆಯಾಗಬಾರದು.

15. ಪ್ರತಿ ವ್ಯಕ್ತಿಯ ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ ಅವರ ಸಾಧನೆಯನ್ನು ಪರಿಗಣಿಸಿ ರಾಜ್ಯೋತ್ಸವ ಪ್ರಶಸ್ತಿಗೆ ಆಯ್ಕೆ ಮಾಡಬಹುದು.

16. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾಸಮಿತಿಗೆ ಪದನಿಮಿತ್ತ ಸದಸ್ಯರನ್ನು ಹೊರತುಪಡಿಸಿ ಇತರ ತಜ್ಞ ಸದಸ್ಯರನ್ನು ಸತತವಾಗಿ ಎರಡು ವರ್ಷಗಳ ಅವಧಿಗೆ ಮುಂದುವರೆಸುವಂತಿಲ್ಲ.

17. ರಾಜ್ಯೋತ್ಸವ ಪ್ರಶಸ್ತಿ ಆಯ್ಕೆ ಸಲಹಾ ಸಮಿತಿಯನ್ನು ರಚಿಸುವುದು, ಹೀಗೆ ರಚಿಸುವಾಗ ಸಾಮಾಜಿಕ ನ್ಯಾಯ, ಪ್ರಾದೇಶಿಕ ನ್ಯಾಯ ಮತ್ತು ಲಿಂಗಾಧಾರಿತ ನ್ಯಾಯವನ್ನು ಸಾಧ್ಯವಾದಷ್ಟು ಅನುಸರಿಸಬೇಕು.

18. ಯಾವುದೇ ಕ್ಷೇತ್ರದ ವ್ಯಕ್ತಿಯನ್ನು ಪ್ರಶಸ್ತಿಗೆ ಶಿಫಾರಸ್ಸು ಮಾಡುವ ಮುನ್ನ ವ್ಯಕ್ತಿಯ ಹಿನ್ನಲೆ, ಮತ್ತು ವಿಷಯ ಕ್ಷೇತ್ರದಲ್ಲಿ ಗಣನೀಯ ಸಾಧನೆಯನ್ನು ಪರಿಗಣಿಸಿ ಶಿಫಾರಸ್ಸು ಮಾಡುವುದು.

19. ಪ್ರಶಸ್ತಿ ಪುರಸ್ಕೃತರನ್ನು ಆಯ್ಕೆ ಮಾಡುವ ವಿಧಾನ:

- ಸಾರ್ವಜನಿಕ ಪ್ರಸ್ತಾವನೆಗಳು, ಸಂಘ-ಸಂಸ್ಥೆಗಳ ಸೂಚನೆಗಳು, ಜಿಲ್ಲಾ ಸಹಾಯಕ ನಿರ್ದೇಶಕರ ಕಚೇರಿ ಮೂಲಕ, ಸರ್ಕಾರದ ವಿವಿಧ ಇಲಾಖೆಗಳ ಮೂಲಕ, ಅಕಾಡೆಮಿ ಪ್ರಾಧಿಕಾರಗಳ ಮೂಲಕ, ಜನಪ್ರತಿನಿಧಿಗಳ ಮೂಲಕ ಸಲ್ಲಿಸುವ ನಾಮನಿರ್ದೇಶನಗಳು ಮತ್ತು ಸಾಧಕರ ಸ್ವಯಂ ಪ್ರಸ್ತಾವನೆ ಸಲ್ಲಿಕೆಯ ಮೂಲಕ ವೈಯಕ್ತಿಕ ವಿವರಗಳ ಸಲ್ಲಿಕೆಗೆ ಅವಕಾಶವನ್ನು ಒದಗಿಸುವುದು,.

- ಹೀಗೆ ಸಲ್ಲಿಕೆಯಾದ ವಿವರಗಳನ್ನು ಸಲಹಾ ಸಮಿತಿಯು ಪರಿಶೀಲಿಸಿ, ತನ್ನ ಗಮನಕ್ಕೆ ಬರುವ ಇತರ ಹೆಸರುಗಳನ್ನು ಅವಶ್ಯವಿದ್ದಲ್ಲಿ ಸೇರ್ಪಡೆಗೊಳಿಸಬಹುದು.

- ಈ ಸಂಬಂಧಿತ ವಿಷಯಕ್ಷೇತ್ರ ತಜ್ಞರ ಅಭಿಪ್ರಾಯ ಪಡೆದು ಅಂತಿಮವಾಗಿ 1:2 ಅನುಪಾತದಲ್ಲಿ ಆಯ್ಕೆ ಸಮಿತಿಯ ಪರಾಮರ್ಶ ಮತ್ತು ಅಂತಿಮ ಆಯ್ಕೆಗಾಗಿ ಸಮಿತಿಯ ಸದಸ್ಯ ಕಾರ್ಯದರ್ಶಿಗಳ ಮೂಲಕ ಪ್ರಶಸ್ತಿ ಆಯ್ಕೆ ಸಮಿತಿಯ ಮುಂದೆ ಮಂಡಿಸುವುದು.

- ಆಯ್ಕೆ ಸಲಹಾ ಸಮಿತಿಯು ಸಲ್ಲಿಸಿದ 1:2 ಅನುಪಾತದ ಪಟ್ಟಿಯಿಂದಲೇ - ಅಂತಿಮವಾಗಿ ಪುರಸ್ಕೃತರನ್ನು ಆಯ್ಕೆ ಸಮಿತಿಯು ಅಂತಿಮಗೊಳಿಸುಬೇಕು.

- ಆಯ್ಕೆ ಸಮಿತಿಯು ಆಯ್ಕೆ ಪ್ರಕ್ರಿಯೆಗಾಗಿ ನಡೆಸುವ ಸಭೆಯಲ್ಲಿ ಆಯ್ಕೆ ಸಲಹಾ ಸಮಿತಿಯ ಸದಸ್ಯರನ್ನು ಸಹ ಸಭೆಗೆ ಕಡ್ಡಾಯವಾಗಿ ಆಹ್ವಾನಿಸುವುದು.

- ಆಯ್ಕೆ ಪ್ರಕ್ರಿಯೆಯ ವೇಳಾಪಟ್ಟಿಯನ್ನು ಈ ಕೆಳಕಂಡಂತ ರೂಪಿಸಿದೆ.

| | |
|---|---|
| ಪ್ರಸ್ತಾವನೆಗಳ ಸಲ್ಲಿಕೆಗೆ ಕಾಲಾವಧಿ | : ಸಪ್ಟೆಂಬರ್ 01 ರಿಂದ 30ರವರೆಗೆ |
| ಆಯ್ಕೆ ಸಲಹಾ ಸಮಿತಿ ಪರಿಶೀಲನೆ ಶಿಫಾರಸ್ಸು ಪ್ರಕ್ರಿಯೆಗೆ | : ಅಕ್ಟೋಬರ್ 01 ರಿಂದ 5ರವರೆಗೆ |
| ಆಯ್ಕೆ ಸಮಿತಿಯ ಆಯ್ಕೆ ಪ್ರಕ್ರಿಯೆಗಳು | : ಅಕ್ಟೋಬರ್ 15 ರಿಂದ 25ರವರೆಗೆ |